(iii) Sri D. Rudriah
(iv) Dr. B. Chandrasekhar
(v) Sri C. D. Kalappa
(2) Sri D. Rudriah.

(*c*) The candidate recommended by the Public Service Commission has been appointed as Special Officer.

Sri C. M. ARUMUGHAM.—I have asked the question whether it is a fact that they have sanctioned the post of a Deputy Director in the Animal Husbandry Department. Why has he been appointed as a Special Officer ?

ಶ್ರೀ ಕ. ಎಫ್. ಪಾಟೀಲ್.—ಈ ಪ್ರಶ್ನೆಗೆ ಈಗಾಗಲೇ ಉತ್ತರ ಕೊಟ್ಟಿದೆ. ನೂಪರ್‌ಸೀಡ್ ಮಾಡುವ ಪ್ರಶ್ನೆ ಬರುತ್ತಿತ್ತು. ಷೆಡ್ಯೂಲ್ ಕ್ಯಾಸ್ಟ್‌ದವರು ಯಾರೂ ಇರಲಿಲ್ಲ. ಆದುದರಿಂದ ಇವರನ್ನು ಸ್ಪೆಷಲ್ ಆಫೀಸರ್ ಎಂದು ನೇಮಕಮಾಡಿದೆ. Technical difficulties avoid ಮಾಡುವುದಕ್ಕೆ ಹಾಗೆ ಮಾಡಿದೆ.

Sri C. M. ARUMUGHAM.—Amongst the five—what is their qualification and service in the department ?

ಶ್ರೀ ಕೆ ಎಫ್. ಪಾಟೀಲ್.—ಈ ವಿವರ ಹಿಂದಿನಿಂದ ಕೊಡಲಾಗುವುದು.

Sri C. M. ARUMUGHAM.—How many times was the name of this Officer (appointed as Special Officer) referred to the Public Service Commission ?

Sri K. F. PATIL.—Two times.

Sri B. RACHIAH.—Is it not a selection post ?

ಶ್ರೀ ಕೆ. ಎಫ್. ಪಾಟೀಲ್.—ಪ್ರಮೋಷನ್ ಪೋಸ್ಟಿನಲ್ಲಿ ನೂಪರ್‌ಸೀಡ್ ಮಾಡಿಹಾಕಲು ಆಗುವುದಿಲ್ಲ. ಆದುದರಿಂದ ಸ್ಪೆಷಲ್ ಪೋಸ್ಟ್‌ಮಾಡಿ ಕೊಟ್ಟಿದೆ.

Sri N. RACHIAH.—Is it not found in the advertisement that it is a selection post ?

ಶ್ರೀ ಕೆ. ಎಫ್. ಪಾಟೀಲ್.—ಡೆಪ್ಯುಟಿ ಡೈರೆಕ್ಟರ್ ಪೋಸ್ಟ್ ಪ್ರೊಮೋಷನ್ ಪೋಸ್ಟ್ ಎಂದು ಇದ್ದಿತು.

ಶ್ರೀ ಎನ್. ಜಿ. ನರಸಿಂಹೇಗೌಡ.—ಈ ಹೆಸರನ್ನು ಏತಕ್ಕಾಗಿ ಬದಲಸಲಾಯಿತು ?

ಶ್ರೀ ಕೆ. ಎಫ್. ಪಾಟೀಲ್.—ಅದರಲ್ಲಿ ಟೆಕ್ನಿಕಲ್ ಡಿಫಿಕಲ್ಟೀಸ್ ಇವೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ನಾಲ್ಕು ಕ್ಯಾಂಡಿಡೇಟ್‌ಗಳಲ್ಲಿ ಅರ್ಹರಾದವರು ಯಾರೂ ಇರಲಿಲ್ಲವೆ ?

ಶ್ರೀ ಕೆ. ಎಫ್. ಪಾಟೀಲ್.—ಪಬ್ಲಿಕ್ ಸರ್ವಿಸ್ ಕಮೀಷನ್ ಅವರು ರೆಕಮೆಂಡ್ ಮಾಡಿರಲಿಲ್ಲ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಯಾವ ಕಾರಣಕ್ಕಾಗಿ ಮಾಡಿರಲಿಲ್ಲ ?

ಶ್ರೀ ಕೆ. ಎಫ್. ಪಾಟೀಲ್.—ಅದು ಪಬ್ಲಿಕ್ ಸರ್ವಿಸ್ ಕಮೀಷನ್‌ಗೆ ಗೊತ್ತು.

Madanahalli-Jeedarahalli Road.

*Q.—287. Sri J. NARAYANAPPA (Mulbagal).—

Will the Government be pleased to state :—

(*a*) since how long the proposal of laying a road from Madanahalli in Kolar taluk to Jeedarahalli in Chintamani taluk and another between Kadahalli and Kaiwar is pending before Government ;

(*b*) whether the Divisional Commissioner has sanctioned the estimate therefor ;

(*c*) if so, the reasons for delay in laying the abovementioned road ?

A.—Sri T. SUBRAMANYA (Minister for Law, Labour and Local Self-Government).—

(*a*) The question of forming a road from Muthukadahalli to Jeedarahalli and on to Madanahalli has been under consideration since 1955.

The road between Kadahalli and Kaiwar has been completed.

(*b*) Yes.

(*c*) The sanctioned estimate is reported to have not been received in the District Board Office. A fresh estimate is being obtained by the Divisional Commissioner for sanctioning the same.

ಶ್ರೀ ಜೆ. ನಾರಾಯಣಪ್ಪ.—ಯಾವಾಗ ಮುಂಜೂರು ಆಗಿದೆ ?

†ಶ್ರೀ ಟಿ. ಸುಬ್ರಹ್ಮಣ್ಯ.—1958ನೆಯ ಇಸವಿಯಲ್ಲಿ ಡಿವಿಜನರ್ ಕಮೀಷನರು ಡಿಸ್ಟ್ರಿಕ್ಟ್‌ಬೋರ್ಡ್ ಸ್ಪೆಷಲ್ ಆಫೀಸರಿಗೆ ಮುಂಜೂರು ಮಾಡಿದ್ದನ್ನು ಕಳಿಸಿದ್ದರು. ಆದರೆ ಅವರು ಅದು ನನ್ನ ಹತ್ತಿರ ಬಂದಿಲ್ಲವೆಂದು ಹೇಳುತ್ತಾರೆ. ಆದುದರಿಂದ ಅದರ ನಕಲು ತಯಾರುಮಾಡಿ ಕಳಿಸಿಕೊಡಬೇಕು ಎಂದು ಹುಕುಮ್ ಮಾಡಿದೆ.

ಶ್ರೀ ಜೆ. ನಾರಾಯಣಪ್ಪ.—ಎರಡೂ ಕಳೆದು ಹೋಗುವುದಕ್ಕೆ ಕಾರಣವೇನು ?

ಶ್ರೀ ಟಿ. ಸುಬ್ರಹ್ಮಣ್ಯ.—1952ರಲ್ಲಿ ಮಾಡಿದ ಅಂದಾಜು ಕಳೆದುಹೋಯಿತು ಎಂಬುದು ಗೊತ್ತಿಲ್ಲ. ಅದನ್ನು ವಿಮರ್ಶೆ ಮಾಡುತ್ತೇನೆ.

ಶ್ರೀ ಜೆ. ನಾರಾಯಣಪ್ಪ.—ಎಲ್ಲಿಯವರೆಗೆ ರಸ್ತೆ ಮಾಡಿಸುವುದು ಮುಂಜೂರು ಆಗಿದೆ ?

ಶ್ರೀ ಟಿ. ಸುಬ್ರಹ್ಮಣ್ಯ.—ಅದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ಪ್ರಶ್ನೆಯಲ್ಲಿ ಮೂರು ಭಾಗಗಳು ಇವೆ. ಮೊದಲನೆಯದಾಗಿ ಕೈವಾರದಿಂದ ಚಿಂತಾಮಣಿಯವರೆಗೆ ಜಲ್ಲಿ ಹಾಕುವುದು, ಎರಡನೆಯದಾಗಿ ಹೈಲೆವೆಲ್ ಕಾಜ್‌ವೇ ಕಟ್ಟಿಸುವುದು ಮೂರನೆಯದಾಗಿ ಮುತ್ತುಕದಹಳ್ಳಿಯಿಂದ ಜೀರಹಳ್ಳಿಯವರೆಗೆ ರಸ್ತೆ ಮಾಡಿಸುವುದು ಇದೆ. ಇದರಲ್ಲಿ ಮೊದಲನೆಯ

(ಶ್ರೀ ಟಿ. ಸುಬ್ರಹ್ಮಣ್ಯ)

ಕೆಲಸ ಮುಗಿದುಹೋಗಿದೆ. ಎರಡನೆಯದು ನಡೆಯುತ್ತಾ ಇದೆ. ಮೂರನೆಯದು ಎಸ್ಟಿಮೇಟ್ ಆಗಿದ್ದು ಮಂಜೂರು ಮಾಡಿದ್ದನ್ನು ಕಳಿಸಿದೆ. ಆದರೆ ಅದು ತಲಪಲಿಲ್ಲವೆಂದು ಅದರ ನಕಲನ್ನು ಕಳಿಸಲು ಹೇಳಿದ್ದೇವೆ.

Transfer of Sandur High School to Private Management.

*Q.—298. Sri M. M. J. SADYOJATHAPPIAH (Harapanahalli).—

Will the Government be pleased to state :—

(*a*) the reasons for transferring Sandur High School from the District Board to a private institution ;

(*b*) the names of the directors of that institution ;

(*c*) whether that institution has been registered, and if so, on what date ;

(*d*) the amount of funds of that institution ?

A.—Sri ANNA RAO GANAMUKHI (Minister for Education).—

(*a*) The proposal of the District Board, Bellary, to transfer the High School to the private institution was agreed to by the Government in view of the policy of the Government to encourage private efforts to open and manage high schools. In addition to this the District Board also is relieved of its financial burden to the extent of its share.

(*b*) The following are the office-bearers and members of the Sandur Education Society :

(1) H. H. Sri Yeshavantha Rao Hinda Rao Ghorpade, Ex-Ruler of Sandur.	President of Sandur Education Society.
(2) Sri Murar Rao Yeshvantha Rao Ghorpade, Yuvaraja of Sandur.	Executive Vice-Chairman.
(3) Sri R. B. Ingle.	Secretary.
(4) Sri R. M. Dehamukh, M.L.A.	Member.
(5) Sri Tekur Subramanyam, M.P.	Do
(6) Her Highness Maharani Sahib Smt. Susheela Devi Yeshavantha Rao Ghorpade.	Member
(7) Yuvarani Smt. Vasundara Devi Saheb M. Yeshvantha Rao Ghorpade.	Do
(8) Sri V. Narasinga Rao, Huzur Secretary to the Maharaja of Sandur.	Do

(*c*) Yes, on 7th October 1958.

(*d*) Rs. 10,000.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈ ಹತ್ತು ಸಾವಿರ ರೂಪಾಯಿ ಪಂಡಿನಿಂದ ಈ ಸಂಸ್ಥೆಯನ್ನು ಎಷ್ಟು ಕಾಲ ನಡೆಸಿಕೊಂಡು ಬರುತ್ತಾರೆಂದು ಸರಕಾರದ ಅಭಿಪ್ರಾಯವಿದೆ ?

†ಶ್ರೀ ಅಣ್ಣಾರಾವ್ ಗಣಮುಖಿ.—ಈಗ ಹತ್ತು ಸಾವಿರ ರೂಪಾಯಿ ಕೊಟ್ಟಿದ್ದಾರೆ. ಇನ್ನು ಮುಂದೆ ಸಹ ಕೊಡುತ್ತಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈ ಸಂಸ್ಥೆಯನ ಶಾಶ್ವತವಾಗಿ ನಡೆಸುವುದಕ್ಕೆ ಹಣ ದೊರೆಯುತ್ತದೆ ಎಂಬುದಕ್ಕೆ ಏನು ಭರವಸೆ ದೊರೆತಿದೆ ?

ಶ್ರೀ ಅಣ್ಣಾರಾವ್ ಗಣಮುಖಿ.—ಅಗ್ರಿಮೆಂಟ್ ತೆಗೆದುಕೊಂಡಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಆ ಅಗ್ರಿಮೆಂಟನ ಸ್ವರೂಪ ಏನಿದೆ ಎಂಬುದನ್ನು ಸಭೆಯ ಮುಂದೆ ಇಡುತ್ತೀರಾ ?

ಶ್ರೀ ಅಣ್ಣಾರಾವ್ ಗಣಮುಖಿ.—ತಾವೇ ಇಡಬಹುದು.

ಶ್ರೀ ಎನ್. ಜಿ. ನರಸಿಂಹೇಗೌಡ.—ಆಡಳಿತ ವರ್ಗದಲ್ಲಿ ನೇಮಕಮಾಡಿರುವುದು ಒಂದು ಕುಟುಂಬಕ್ಕೆ ಸೇರಿದ ಜನರೇ ಇದ್ದಾರೆ. ಇದು ಏನು ಒಂದು family affair ಆಗಿದೆಯೇ ಎಂಬುದು ಅರ್ಥವಾಗುವುದಿಲ್ಲವಲ್ಲಾ !

ಶ್ರೀ ಅಣ್ಣಾರಾವ್ ಗಣಮುಖಿ.—ಅದರ ಅರ್ಥ ಇಷ್ಟೇ. ಅದರಲ್ಲಿ founder members, life members, patrons ಈ ಪ್ರಕಾರ ಇದ್ದಾರೆ.

Sri M. DANAPPA.—May I take it that the High School is the personal property of the Raja Saheb of Sandur ?

Sri ANNA RAO GANAMUKHI.—Not at all.

ಶ್ರೀ ಎಂ. ಎಂ. ಜೆ. ಸದ್ಯೋಜಾತಪ್ಪಯ್ಯ.—ಜಿಲ್ಲಾಬೋರ್ಡಿನಿಂದ ಈ ಸಂಸ್ಥೆಗೆ ಹೈಸ್ಕೂಲನ್ನು ವರ್ಗಾಯಿಸಿದ್ದು ಯಾವ ತಾರೀಖು ?

Sri ANNA RAO GANAMUKHI.—10th October 1958.

Sri K. PUTTASWAMY.—May I know the value of the assets that belong to the High School ? Only the assets.

Sri ANNA RAO GANAMUKHI.—The present school building belongs to the